ಉಪ್ಪಿನಂಗಡಿ-ಕಡಲ-ಸುಬ್ರಹ್ಮಣ್ಯ ರಸ್ತೆಯ ಹೊಸಮಠ ಎಂಬಲ್ಲಿ ಸರ್ವಋತು ಸೇತುವೆ.

2849: (3922)

ಶ್ರೀ ಎಸ್. ಅಂಗಾರ (ಸುಳ್ಯ): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಉಪ್ಪಿನಂಗಡಿ-ಕಡಲ-ಸುಬ್ರಹ್ಮಣ್ಯ ರಸ್ತೆಯ ಹೊಸ ಮಠ ಎಂಬಲ್ಲಿ ಮುಳುಗು ಸೇತುವೆ ಇದ್ದು, ಸದರಿ ಸೇತುವೆಯನ್ನು ಸರ್ವ ಋತು ಸೇತುವೆಯನ್ನಾಗಿ ಮಾಡುವ ಉದ್ದೇಶ ಸರ್ಕಾರಕ್ಕೆ ಇದೆಯೆ? ಹಾಗಿದ್ದಲ್ಲಿ ಇದನ್ನು ಯಾವಾಗ ಕೈಗೆತ್ತಿಕೊಳ್ಳಲಾಗುವುದು.

ಆ) ರಾಜ್ಯದಲ್ಲಿ ನಬಾರ್ಡ್ ಯೋಜನೆಯಡಿಯಲ್ಲಿ ಯಾವ ಯಾವ ಕ್ಷೇತ್ರಕ್ಕೆ ಎಷ್ಟೆಷ್ಟು ಅನುದಾನ ಒದಗಿಸಲಾಗಿದೆ (ಪೂರ್ತಿ ವಿವರ ನೀಡುವುದು)?

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು):

ಅ) ಪ್ರಸ್ತಾವನೆ ಸಧ್ಯದಲ್ಲಿ ಇರುವುದಿಲ್ಲ.

ಆ) ಕಾಮಗಾರಿಗಳು ಹಬ್ಬಿರುವ ಕ್ಷೇತ್ರವಾರು ವಿವರವನ್ನು ಅನುಬಂಧ 'ಅ'ನಲ್ಲಿ ನೀಡಲಾಗಿದೆ. (ಪ್ರಶ್ನೆ ಸಂಖ್ಯೆ 4029ನಕ್ಕೆ ನೀಡಲಾಗಿದೆ)

ರಾಜ್ಯ ನಿರ್ಮಾಣ ನಿಗಮದಲ್ಲಿರುವ ಸಿಬ್ಬಂದಿ.

2850::(4025)

ಶ್ರೀ ಯು.ಬಿ.ಬಣಕಾರ್ (ಹಿರೇಕೆರೂರು): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ರಾಜ್ಯ ನಿರ್ಮಾಣ ನಿಗಮದಲ್ಲಿರುವ ಸಿಬ್ಬಂದಿ ಸಂಖ್ಯೆ ಎಷ್ಟು (ವಿವರಗಳನ್ನು ಒದಗಿಸುವುದು)

ಆ) 1997ನೇ ಸಾಲಿನಿಂದ ಎಷ್ಟು ಜನ ಸಿಬ್ಬಂದಿಯನ್ನು ನೇಮಕಾತಿ ಮಾಡಿಕೊಳ್ಳಲಾಗಿದೆ (ವಿವರ ಒದಗಿಸುವುದು);

ಇ) ನೇಮಕಾತಿಯನ್ನು ಮಾಡಿಕೊಳ್ಳಲು ಅನುಸರಿಸಿದ ನೀತಿ ನಿಯಮಗಳೇನು?

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು):